# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

## ವಿಶೇಷ ಪ್ರಕರಣ ಸಂಖ್ಯೆಃ 01/2016

ಪ್ರಾ.ಸಾ.- 26

ಚಾ.ಸಾ.- 104

| | | |
|---|---|---|
| ಸಾಕ್ಷಿದಾರರ ಹೆಸರು | ಃ | ತಮ್ಮರಾಯ ಆರ್ ಪಾಟೀಲ್ |
| ತಂದೆಯ ಹೆಸರು | ಃ | ರೇವಗೊಂಡಪ್ಪ ಪಾಟೀಲ್ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಪೊಲೀಸ್ ಇನ್ಸ್‌ಪೆಕ್ಟರ್ , ಪೊಲೀಸ್ ಟ್ರೈನಿಂಗ್ ಕಾಲೇಜ್ , ಕಲ್ಬುರ್ಗಿ |
| ವಾಸ ಸ್ಥಳ | ಃ | ಕಲ್ಬುರ್ಗಿ |

ಪ್ರಮಾಣ ವಚನದ ನಂತರ, ದಿನಾಂಕಃ 29-10-2018

**ಃ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ.ಪಿ. ಯವರಿಂದಃ**

1. ನಾನು ಜೂನ್ 2011 ರಿಂದ ಏಪ್ರಿಲ್ 2015 ರವರೆಗೆ ಕಲ್ಬುರ್ಗಿಯ ಲೋಕಾಯುಕ್ತ ಕಛೇರಿಯಲ್ಲಿ ಲೋಕಾಯುಕ್ತ ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ.

2. ದಿನಾಂಕಃ 21-03-2013 ರಂದು ಲೋಕಾಯುಕ್ತ ಡಿವೈಎಸ್‌ಪಿ ಚಿಕ್ಕಮಗಳೂರು ಪ್ರಸನ್ನ ಇವರ ಆದೇಶದಂತೆ ನಾನು ಇಬ್ಬರು ಪಂಚರನ್ನು ನಾನು ನಮ್ಮ ಕಲ್ಬುರ್ಗಿಯ ನಮ್ಮ ಠಾಣೆಗೆ ಕರೆಸಿಕೊಂಡು ಅವರ ವಿವರಗಳನ್ನು ಪಡೆದುಕೊಂಡು ದಿನಾಂಕಃ 22-03-2013 ರಂದು ಬೆಳಿಗ್ಗೆ 4.30 ಗಂಟೆಗೆ ಠಾಣೆಗೆ ಬರುವಂತೆ ಸೂಚಿಸಿ ಕಳುಹಿಸಿಕೊಟ್ಟಿರುತ್ತೇನೆ.

3. ಅದರಂತೆ ದಿನಾಂಕಃ22-03-2013 ರಂದು ಬೆಳಿಗ್ಗೆ 4.30 ಗಂಟೆಗೆ ಲೋಕಾಯುಕ್ತ ಠಾಣೆ ಕಲ್ಬುರ್ಗಿಯಲ್ಲಿ ಡಿವೈಎಸ್‌ಪಿ ಪ್ರಸನ್ನ ಇವರಿಂದ ಒಂದು ಜ್ಞಾಪನಾ ಪತ್ರ ಹಾಗೂ ನ್ಯಾಯಲಯದ ಸರ್ಚ್ ವಾರೆಂಟ್ ಪಡೆದುಕೊಂಡಿರುತ್ತೇನೆ. ಈಗ ತೋರಿಸಿದ ಸರ್ಚ್ ವಾರೆಂಟ್ ಅದೇ ಆಗಿದ್ದು ಆ ಸರ್ಚ್ ವಾರೆಂಟ್‌ನ್ನು ನಿಶಾನೆ ಪಿ-70 ಎಂದು ಗುರುತಿಸಲಾಯಿತು. ಅದರ ಮೇಲಿನ ಸಾಕ್ಷಿಯ ಸಹಿಯನ್ನು ನಿಶಾನೆ ಪಿ-70(ಎ) ಎಂದು ಗುರುತಿಸಲಾಯಿತು.

4. ನಂತರ ಆ ಸರ್ಚ್ ವಾರೆಂಟ್ ಬಗ್ಗೆ ಪಂಚ ಸಾಕ್ಷಿದಾರರಾದ ಜಗನ್ನಾಥ ಹೆಬ್ಬಾಳ ಮತ್ತು ರೂಪಾ ಕಮಲಾಕರ್ ಇವರಿಗೆ ವಿವರ ತಿಳಿಸಿದೆ. ನಂತರ ಪಂಚ ಸಾಕ್ಷಿದಾರರು ಸರ್ಚ್ ವಾರೆಂಟ್ ಗೆ ಸಹಕರಿಸುತ್ತೇವೆ ಎಂದು ಒಪ್ಪಿದ ಮೇರೆಗೆ ಅವರನ್ನು ನಮ್ಮ ಇಲಾಖಾ ಜೀಪಿನಲ್ಲಿ ಕರೆದುಕೊಂಡು ನಮ್ಮ ಸಿಬ್ಬಂದಿಯೊಂದಿಗೆ ಬೆಳಿಗ್ಗೆ 5 ಗಂಟೆಗೆ ಹೊರಟು ಆಳಂದ ತಾಲ್ಲೂಕು ನಾಸರವಾಡಿ ಗ್ರಾಮಕ್ಕೆ ತಲುಪಿದೆವು.

5. ನಂತರ ಆ ಸರ್ಚ್ ವಾರೆಂಟ್‌ನಲ್ಲಿದ್ದ ಮನೆಗೆ ಹೋದೆವು. ಅಲ್ಲಿ ಆ ಮನೆಯ ಗೇಟ್ ಲಾಕ್ ಆಗಿತ್ತು. ಆಗ ಅಕ್ಕಪಕ್ಕದ ಮನೆಯವರನ್ನು ವಿಚಾರ ಮಾಡಿದಾಗ ಒಬ್ಬ ಅರ್ಜುನ್ ಎನ್ನುವವನು ಆ ಮನೆಯನ್ನು ನೋಡಿಕೊಳ್ಳುತ್ತಾನೆಂದು ಹೇಳಿದರು. ಆ ಅರ್ಜುನ್ ಎನ್ನುವ ವ್ಯಕ್ತಿಯನ್ನು ಆ ಮನೆಗೆ ಕರೆಸಿದೆವು.

6. ಆತನನ್ನು ವಿಚಾರಿಸಿದಾಗ ಆತ ಆ ಮನೆ ಚೆನ್ನಬಸಪ್ಪ ಮಕಾಳೆ ಇವರಿಗೆ ಸೇರಿದ್ದು ಅವರು ತನಗೆ ಚಿಕ್ಕಪ್ಪ ಆಗಬೇಕೆಂದು ತಿಳಿಸಿದ. ನಂತರ ಮಾನ್ಯ ನ್ಯಾಯಾಲಯ ಹೊರಡಿಸಿದ ಸರ್ಚ್ ವಾರೆಂಟ್ ನ್ನು ಅವನಿಗೆ ತೋರಿಸಿ

ಅದರ ಮೇಲೆ ಅವನ ಸಹಿ ಪಡೆದುಕೊಂಡೆನು. ಅವನ ಒಪ್ಪಿಗೆ ಪಡೆದ ನಂತರ ನಾನು , ಸಿಬ್ಬಂದಿಯವರು ಮತ್ತು ಪಂಚರು ಅಂಗಶೋಧನೆ ಮಾಡಿಕೊಂಡೆವು. ನಂತರ ಗೇಟ್‌ನ್ನು ಓಪನ್ ಮಾಡಿ ಬೆಳಿಗ್ಗೆ 6.30 ಕ್ಕೆ ಗೇಟ್ ಒಳಗೆ ಹೋದೆವು.

1) ಅಲ್ಲಿ ಕಾಂಪೌಂಡ್ ಒಳಗೆ ಪರಿಶೀಲಿಸಸಲಾಗಿ ಮನೆಗೆ ಅಳವಡಿಸಿದ ವಿದ್ಯುತ್ ಮೀಟರ್ ಆರ್ ಆರ್ ನಂಃ ಎನ್ ಡಬ್ಲ್ಯೂಡಿ ನಂಃ 35884.

2) 3 ಪ್ಲಾಸ್ಟಿಕ್ ಬ್ಯಾರಲ್

3) ಮನೆಯ ಉತ್ತರ ದಿಕ್ಕಿಗೆ ಒಂದು ಬೋರ್ ಹಾಕಿದ್ದು ಅದಕ್ಕೆ ಸಬ್ ಮರ್ಸಿಬಲ್ ಮೋಟಾರ್ ಅಳವಡಿಸಿರುತ್ತಾರೆ.

4) ಒಂದು ಸಲಕೆ , ಗುದ್ದಲಿ , ಇತರೆ ಒಕ್ಕಲುತಕ್ಕೆ ಸಂಬಂಧಿಸಿದ ಸಾಮಗ್ರಿಗಳು ಇದ್ದವು. ಅವುಗಳ ಅಂದಾಜು ಮೌಲ್ಯವನ್ನು ಮಾಡಿದೆವು.

7. ನಂತರ ಮುಖ್ಯದ್ವಾರದಿಂದ ಮನೆಯನ್ನು ಪ್ರವೇಶಿಸಲಾಗಿ ಮೊದಲಿಗೆ ಮನೆಯಲ್ಲಿ ಒಂದು ಹಾಲ್ ಇದ್ದು ಅದರ ಅಳತೆ 24x17 ಅಳತೆಯ ಹಾಲ್ ಇತ್ತು. ಪರಿಶೀಲಿಸಲಾಗಿ ಈ ಕೆಳಕಂಡ ವಸ್ತುಗಳು ಕಂಡು ಬಂದವು.

1) ಒಂದು ಟಿ.ವಿ. ಶೋಕೇಸ್

2) 2 ಲ್ಯಾಮಿನೇಷನ್ ಫೋಟೋ

3) ಒಂದು ಎಲ್ ಸಿ ಡಿ ಮಾನಿಟರ್

4) ಒಂದು ಶ್ಯೂ ಸ್ಟ್ಯಾಂಡ್

5) ನಾಲ್ಕು ಪ್ಲಾಸ್ಟಿಕ್ ಚೇರ್

6) ಒಂದು ಸೋಫಾ ಸೆಟ್

7) ದಿವಾನ್ ಸೆಟ್ ಮತ್ತು ಕುಶನ್

8) ಪೂರ್ವ ದಿಕ್ಕಿನ ಗೋಡೆಗೆ ಇರುವ ಗ್ಲಾಸ್ ಮತ್ತು ಪ್ಲೈವುಡ್ ಶೋಕೆಸ್

9) ಒಂದು ಗೋದರೆಜ್ ಕಬ್ಬಿಣ ಅಲಮೇರಾ

10) 52 ಆಡಿಯೋ ಮತ್ತು ವೀಡಿಯೋ ಕ್ಯಾಸೆಟ್ ಗಳು

11) ಒಂದು ಟಿ ವಿ ಸ್ಟ್ಯಾಂಡ್

12) ಸ್ಯಾಮ್ ಸಂಗ್ ಕಂಪನಿಯ ಡಿವಿಡಿ ಪ್ಲೇಯರ್

13) ಎರಡು ಸೀಲಿಂಗ್ ಆ್ಯಂಕರ್ ಕಂಪನಿಯ ಫ್ಯಾನ್

14) 16 ಸಿ ಎಫ್ ಎಲ್ ಬಲ್‌ಬ್

15) 42 ತೊಗರಿ ಚಿಲಗಳು

16) 3 ಜೋಳದ ಚೀಲ

17) 5 ಚೀಲ ಸಜ್ಜೆ

18) 1 ಕಡ್ಲೆ ಚೀಲ

19) ಕಬ್ಬಿಣ ಅಲಮೇರಾದಲ್ಲಿ ದೊರೆತ ಅರ್ಜುನ್ ಹೆಸರಿನಲ್ಲಿರುವ ಒಂದು ಕಿಂಗ್ ಸೈಜ್ ನೋಟ್ ಪುಸ್ತಕ ಇವುಗಳು ಸಿಕ್ಕವು. ಅವುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

8. ನಂತರ ಹಾಲ್ ಗೆ ಲಗತ್ತಾಗಿ ಬಲಗಡೆ ಇರುವ ಅಡುಗೆ ಮನೆ ಕೋಣೆಗೆ ಹೋಗಿ ಪರಿಶೀಲಿಸಲಾಗಿ ಕೆಳಕಂಡ ವಸ್ತುಗಳು ಕಂಡು ಬಂದವು.

1) ಒಂದು ಡೈನಿಂಗ್ ಟೇಬಲ್ ಸೆಟ್.

2) ಒಂದು ಪ್ರೆಸ್ಟೀಜ್ ಇಂಡೆಕ್ಷನ್ ಸ್ಟೌ

3) ಒಂದು ಗ್ಯಾಸ) ಸ್ಟೌ ಮತ್ತು ಇಂಡಿಯನ್ ಸಿಲಿಂಡರ್

4) ಗೋದ್ರೇಜ್ ಫಿಡ್ಜ್ ಸಂಗಡ ಸ್ಟೆಬಲೈಸರ್

5) ಒಂದು ತಾಮ್ರದ ಕೊಡ (ಅರ್ಜುನ ಮಕಾಲೆರವರ ಹೆಸರುಳ್ಳದ್ದು)

6) ಒಂದು ಕಂಚಿನ ಕಳಸ

7) 6 ಕಟ್ಟಿಗೆ ಮನೆಗಳು

8) ಒಂದು ಟ್ಯೂಬ್‌ಲೈಟ್

9) ಅಡುಗೆ ಪಾತ್ರೆಗಳು

10) ಅಡುಗೆ ಮನೆಯ ಕಿಚನ್ ಕಟ್ಟೆ ಕೆಳಗೆ ವಾರ್ಡ್ರೋಬ್ ಮಾಡಿಸಿದ್ದು ಕಂಡು ಬಂದವು. ಅವುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

9. ನಂತರ ಅಡಿಗೆ ಮನೆಗೆ ಹೊಂದಿಕೊಂಡಿರುವ ಮಾಸ್ಟರ್ ಬೆಡ್ ರೂಂ ಒಳಗೆ ಪ್ರವೇಶ ಮಾಡಲಾಗಿ ಈ ಕೆಳಕಂಡ ವಸ್ತುಗಳು ಕಂಡು ಬಂದಿರುತ್ತವೆ.

1) ಒಂದು ಡಬಲ್ ಕಾಟ್ ಪ್ಲೈವುಡ್ ನದ್ದು

2) ಒಂದು ಸಿಂಗಲ್ ಕುರ್ಲಾನ್ ಬೆಡ್

3) ಒಂದು ಚಾಪೆ

4) ಒಂದು ಜುಮರ್ ಸೆಟ್

5) ಒಂದು ಎಕ್ಸಿಕ್ಯೂಟಿವ್ ಚೇರ್

6) ಒಂದು ಟೇಬಲ್ ಫ್ಯಾನ್

7) ಒಂದು ಸೀಲಿಂಗ್ ಫ್ಯಾನ್

8) ಒಂದು ಟ್ಯೂಬ್ ಲೈಟ್

9) ಎರಡು ಚೌಕಾಮಣಿ

10) 2 ಬ್ಲಾಂಕೇಟ್ ಮತ್ತು 2 ಜಮಖಾನ

11) ವಾರ್ಡ್‌ರೂಬ್

12) 2 ಕಂಪ್ಯೂಟರ್ ಕೀಬೋರ್ಡ್

13) ಸಿಎಲ್ ಎಫ್ ಬಲ್ಬ್ ಒಂದು

14) ದಿನಬಳಕೆ ಬಟ್ಟೆಗಳು 4 ಶರ್ಟು , 2 ಪ್ಯಾಂಟ್

15) ಆಪಾದಿತನ ಮಗ ಅನಿಲ್ ಕುಮಾರ ಇವರ ಹೆಸರಿನಲ್ಲಿರುವ ವಿಜಯ ಬ್ಯಾಂಕ್ ಯಾದಗಿರಿಯಲ್ಲಿ ಹೊಂದಿರುವ ಖಾತೆ ನಂ: 14640101100994 ಯ ರಶೀದಿ.

16) ವಿದ್ಯುತ್ ಮೀಟರ್ ಆರ್ ಆರ್ ನಂಃ ಎನ್ ಡಬ್ಲ್ಯೂ ಡಿ 35884 ನೇದ್ದನ್ನು ಆಪಾದಿತ ಚೆನ್ನಬಸಪ್ಪ ಇವರ ಹೆಸರಿನಲ್ಲಿ ವಿದ್ಯುತ್ ಬಿಲ್ ಸಂದಾಯ ಮಾಡಿದ ಬಿಲ್ ಮತ್ತು ರಶೀದಿ.

17) ಶ್ರೀ ಗಣೇ ಅಪ್ಲಾಯನ್ಸಸ್ ಇವರಿಂದ ಆಪಾದಿತನ ಹೆಸರಿನಲ್ಲಿ ಖರೀದಿಸಿದ ಸೋನಿ ಎಲ್ ಇ ಡಿ ನೇದ್ದರ ಟ್ಯಾಕ್ಸ್ ಇನ್‌ವೈಸ್

18) 2 ಹೊಸ ಬ್ಲಾಂಕೇಟ್ಸ್

19) ಕಾರ್ಪೆಟ್ ದೊಡ್ಡದು

20) ಒಂದು ಚಿಕ್ಕ ಕಾರ್ಪೇಟ್

21) 1,000 ರೂ. ನಗದು ಹಣ ಸಿಕ್ಕವು. ಇವುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು ಮತ್ತು ದಾಖಲಾತಿಗಳನ್ನು ವಶಪಡಿಸಿಕೊಂಡೆವು. ಆ ಹಣವನ್ನು ಮರಳಿ ಆಪಾದಿತನ ಅಣ್ಣನ ಮಗ ಅರ್ಜುನ್ ಈತನಿಗೆ ಕೊಟ್ಟೆವು.

10. ನಂಡರ್ ಬೆಡ್ ರೂಂಗೆ ಲಗತ್ತಾಗಿರುವ ದೇವರ ಕೋಣೆಗೆ ಪ್ರವೇಶಿಸಿ ಪರೀಶಿಲಿಸಲಾಗಿ ಈ ಕೆಳಕಂಡ ವಸ್ತುಗಳು ಸಿಕ್ಕವು.

1) ದೇವರ ಫೋಟೋಗಳು 4 ಲೈ ವ್ಯವಸ್ಥೆ ಹೊಂದಿದ್ದವು.

2) ಒಂದು ಸಿ ಎಫ್ ಎಲ್ ಬಲ್ಬ್

3) ಕಂಚಿನ ಕಳ ಸೆಟ್ 2 ಸಿಕ್ಕವು. ಇವುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು

11. ನಂತರ ಪೂಜಾ ರೂಂಗೆ ಹೊಂದಿಕೊಂಡಿರುವ ಇನ್ನೊಂದು ಬೆಡ್ ರೂಂಗೆ ಪ್ರವೇಶಿಸಿದಾಗ ಈ ಕೆಳಕಂಡ ವಸ್ತುಗಳು ಸಿಕ್ಕವು.

1) ಒಂದು ಸೀಲಿಂಗ್ ಫ್ಯಾನ್

2) ಪ್ಲಾಸ್ಟಿಕ್ ಚೇರ್ ಸೆಲ್ಲೋ ಕಂಪನಿಯದ್ದು 8

3) ಒಂದು ಟ್ಯೂಬ್ ಲೈಟ್

4) ಒಂದು ಟ್ರೆಡ್ ವಿಲ್ ಮಶೀನ್

5) ಸ್ಪೋರ್ಟ್ ಎಲಿಮೆಂಟ್ ಸೈಕ್ಲಿಂಗ್

6) ಆಫೀಸ್ ಟೇಬಲ್

7) ಒಂದು ಕಾಟನ್ ಬಿಡಿ ಭಾಗಗಳು

8) ಡಂಬಲ್ ಒಂದು

9) ಒಂದು ಸ್ಪೀಕರ್ 2 ಮೌಸ್ ಸಿಕ್ಕವು.

ಮೇಲೆ ಹೇಳಿದ ವಸ್ತುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ

ಮಾಡಿದೆವು.

12. ನಂತರ ಹಾಲಿಗೆ ಹೊಂದಿಕೊಂಡಿರುವ ಪಶ್ಚಿಮ ದಿಕ್ಕಿಗಿರು ಬೆಡ್ ರೂಂ ಒಳಗಡೆ ಪ್ರವೇಶಿಸಿ ನೋಡಲಾಗಿ ಈ ಕೆಳಕಂಡ ವಸ್ತುಳು ಸಿಕ್ಕಿರುತ್ತವೆ.

1) ಒಂದು ಸೀಲಿಂಗ್ ಫ್ಯಾನ್

2) ಒಂದು ಟ್ಯೂಬ್ ಲೈಟ್

3) 3 ಚೀಲ ಮೆಕ್ಕೆ ಜೋಳ

4) 1 ಚೀಲ ಸಜ್ಜೆ

5) 1 ತೊಗರಿಗೆ ಎಣ್ಣೆ ಹೊಡೆಯುವ ಸ್ಪ್ರೇ ಮಿಶಿನ್ ಸಿಕ್ಕವು.

ಮೇಲೆ ಹೇಳಿದ ವಸ್ತುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

13. ನಂತರ ಹಾಲ್ ನಿಂದ ಮೊದಲನೇ ಅಂತಸ್ತಿನಲ್ಲಿ ಬಲಭಾಗದ ಒಂದು ಬೆಡ್ ರೂಂ ಒಳಗೆ ಪ್ರವೇಶಿಸಿ ನೋಡಲಾಗಿ ಈ ಕೆಳಕಂಡ ವಸ್ತುಳು ಸಿಕ್ಕಿರುತ್ತವೆ.

1) 2 ಸೀಲಿಂಗ್ ಫ್ಯಾನ್

2) ಒಂದು ಟ್ಯೂಬ್ ಲೈಟ್

3) 2 ಸಿ ಎಫ್ ಎಲ್ ಬಲ್ಬ್

4) ಒಂದು ಗೋದ್ರೇಜ್ ಕಂಪನಿಯ ಕಬ್ಬಿಣದ ಪಲಂಗ

5) ಒಂದು ವಾರ್ಡ್ ರೂಬ್

6) ಜಮಖಾನಿ ಒಂದು , ಚಾಪೆ ಒಂದು ಸಿಕ್ಕವು.

ಮೇಲೆ ಹೇಳಿದ ವಸ್ತುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

14. ನಂತರ ಮೊದಲನೇ ಅಂತಸ್ತಿನಲ್ಲಿರುವ ಬೆಡ್ ರೂಂನ ಎಡಭಾಗದ ಕೋಣೆಯಲ್ಲಿ ಪ್ರವೇಶ ಮಾಡಿ ನೋಡಲಾಗಿ ಈ ಕೆಳಕಂಡ ವಸ್ತುಗಳು ಸಿಕ್ಕವು.

1) ತೊಗರಿ ಚೀಲ ಒಂದು

2) ಒಂದು ಸಿ ಎಫ್ ಎಲ್ ಬಲ್ಬ್ ಸಿಕ್ಕವು.

ಮೇಲೆ ಹೇಳಿದ ವಸ್ತುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

15. ನಂತರ ಮೊದಲನೇ ಅಂತಸ್ತಿನ ಪೂರ್ವ ದಿಕ್ಕಿನಲ್ಲಿ ಒಂದು ದೊಡ್ಡದಾದ ಅಟ್ಯಾಚ್ ಬಾತ್ ರೂಂ ಕೋಣೆ ಇದ್ದು ಪ್ರವೇಶ ಮಾಡಿ ನೋಡಲಾಗಿ ಈ ಕೆಳಕಂಡ ವಸ್ತುಗಳು ಸಿಕ್ಕವು.

1) ಒಂದು ಪ್ಲಾಸ್ಟಿಕ್ ಬಕೇಟ್ ಮತ್ತು ಮಗ್ ಸಿಕ್ಕಿತು.

ಮೇಲೆ ಹೇಳಿದ ವಸ್ತುವನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

16. ನಂತರ ಮೊದಲನೇ ಅಂತಸ್ತಿನ ಬಲಗೆ ಕೋಣೆಯ ಪಕ್ಕದಲ್ಲಿರುವ ಕಬ್ಬಿಣದ ಸ್ಟೇರ್ ಕೇಸ್ ನ ಮೇಲೆ ಹತ್ತಿದಾಗ ಈ ಕೆಳಕಂಡ ವಸ್ತುಗಳು ಸಿಕ್ಕವು.

1) ಒಂದು ನೀರಿನ ಪ್ಲಾಸ್ಟಿಕ್ ವಾಟರ್ ಟ್ಯಾಂಕ್

2) ಒಂದು ಡಿ ಟಿ ಹೆಚ್ ಛತ್ರಿ ಸಿಕ್ಕವು.

ಮೇಲೆ ಹೇಳಿದ ವಸ್ತುಗಳನ್ನು ಪಂಚರ ಸಮಕ್ಷಮ ಅಂದಾಜು ಮೌಲ್ಯ ಮಾಡಿದೆವು.

17. ಸದರಿ ಮನೆಯು ಒಟ್ಟು 93X78 ಚ.ಅಡಿ. ಅಳತೆಯಿತ್ತು. ಆ ಮನೆಗೆ ಸುತ್ತಲೂ ಕಾಂಪೌಂಡ್ ಗೋಡೆ ಕಟ್ಟಲಾಗಿತ್ತು. ಮತ್ತು ಒಳಗಡೆ ನೆಲ ಗ್ರಾನೈಟ್ ಹಾಸಿಗೆ ಇತ್ತು.

18. ನಂತರ ಅರ್ಜುನ್ ಈತನನ್ನು ಚೆನ್ನಬಸಪ್ಪ ಇವರ ಬಗ್ಗೆ ವಿಚಾರಿಸಲಾಗಿ ತನ್ನ ಚಿಕ್ಕಪ್ಪನಾದ ಚನ್ನಬಸಪ್ಪ ಇವರ ಬುಲೇರೋ ವಾಹನ ವನ್ನ ತನ್ನ ಮನೆಯ ಹತ್ತಿರ ಇರುವುದಾಗಿ ತಿಳಿಸಿದ. ಅದರಂತೆ ನಾವು ಆತನ ಮನೆಯ ಹತ್ತಿರ ಹೋದೆವು. ಅಲ್ಲಿ ಒಂದು ಬುಲೇರೋ ವಾಹನ ಇದ್ದು ಅದನ್ನು ಪರಿಶೀಲಿಸಲಾಗಿ ಅದರ ನಂಃ ಕೆಎ-32 ಎಂ-8252 ಇತ್ತು. ಅದರ ಮೀಟರರ್ ರೀಡರ್ ನೋಡಲಾಗಿ 1,49,894 ಇತ್ತು. ವಾಹನದ ಒಳಗಡೆ ಪರಿಶೀಲಿಸಿ ನೋಡಲಾಗಿ ವಾಹನದ ನೊಂದಣಿ ಹಾಗೂ ಇನ್ಸೂರೆನ್ಸ್ ಕಾರ್ಡ್ ಇದ್ದವು. ಆಪಾದಿತರ ಕುಟುಂಬದ ಪಡಿತರ ಚೀಟಿ , ಆಪಾದಿತನ ಪತ್ನಿ ಹೆಸರಿನಲ್ಲಿ ಉಮರ್ಗ ಜನತಾ ಸಹಕಾರಿ ಬ್ಯಾಂಕಿನ ಖಾತೆಯ ಪುಸ್ತಕ , ಆಪಾದಿತನು ವಿಜಯಲಕ್ಷ್ಮಿ ಕ್ಲೀನಿಕ್ ನಲ್ಲಿ ಪಡೆದಿರುವ ಚಿಕಿತ್ಸೆಯ ರಶೀದಿಗಳು , ಆಪಾದಿತ

ಹೆಸರಿನಲ್ಲಿರುವ ಕೃಷ್ಣಾ ಗ್ರಾಮೀಣ ಬ್ಯಾಂಕಿನ ಪಾಸ್ ಪುಸ್ತಕ ಇವುಗಳನ್ನು ಜಪ್ತಿಪಡಿಸಿಕೊಂಡೆವು.

19. ಸದರಿ ಪಂಚನಾಮೆ ಕಾಲಕ್ಕೆ ವೀಡಿಯೋಗ್ರಾಫೀ ಹಾಗೂ ಫೋಟೋಗ್ರಾಫೀ ಮಾಡಿದ್ದು ಈ ಬಗ್ಗೆ ಒಂದು ಶೋಧನಾ ಪಂಚಾನಾಮೆಯನ್ನು 6.30 ರಿಂದ 11.30 ರವರೆಗೆ ಮಾಡಿರುತ್ತೇವೆ. ಸದರಿ ಶೋಧನಾ ಸಮಯದಲ್ಲಿ ಒಟ್ಟು ರೂ. 4,96,613/- ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳು , ಒಂದು ಬುಲೆರೋ ವಾಹನ ರೂ.5.00 ಲಕ್ಷದ್ದು , ಮನೆಯ ಕಟ್ಟವನ್ನು ಅಂದಾಜು 25 ಲಕ್ಷ ಎಂದು ಅಂದಾಜು ಮೌಲ್ಯ ಮಾಡಲಾಗಿದೆ.

20. ಈ ಬಗ್ಗೆ ನಾನು ಮರಳಿ ಲೋಕಾಯುಕ್ತ ಕಛೇರಿಗೆ ಬಂದು ಮಹಜರ್ , ಸರ್ಚ್ ವಾರೆಂಟ್ ಜಪ್ತಿ ಪಡಿಸಿಕೊಂಡ ದಾಖಲಾತಿಗಳನ್ನು ನಮ್ಮ ಕಲ್ಬುರ್ಗಿ ಠಾಣೆಗೆ ಬಂದು ಡಿವೈಎಸ್‌ಪಿ ಚಿಕ್ಕಮಗಳೂರು ಇವರಿಗೆ ಕಳುಹಿಸಿದ್ದೇನೆ.

21. ಈಗ ತೋರಿಸಿದ ನಿಪಿ.6 ನೋಡಲಾಗಿ ಅದೇ ನಾವು ಆ ದಿನ ಆರೋಪಿತರ ಮನೆಯಲ್ಲಿ ಮಾಡಿದ ಪಂಚನಾಮೆಯಾಗಿದ್ದು ಆಗಿದ್ದು ಅದಕ್ಕೆ ನನ್ನ ಸಹಿ ಇರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ-6(ಬಿ) ಎಂದು ಗುರುತಿಸಲಾಯಿತು.

22. ಈಗ ತೋರಿಸಿದ ನಿಪಿ.5 ನೋಡಲಾಗಿ ಅದರಲ್ಲಿ ಇರುವ ದಾಖಲಾತಿಗಳನ್ನೇ ಪಂಚನಾಮೆ ಸಮಯದಲ್ಲಿ ಅಮಾನತ್ತು ಪಡಿಸಿದ ದಾಖಲಾತಿಗಳಾಗಿರುತ್ತವೆ.

23. ದಿನಾಂಕಃ13-06-2013 ರಂದು ಡಿವೈಎಸ್‌ಪಿ ಪ್ರಸನ್ನ ಇವರ ಮುಂದೆ

ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಃ ಶ್ರೀ ಕೆ.ಎಸ್.ಎಸ್.ಪಿ. ವಕೀಲರಿಂದಃ</u>**

24. ಡಿವೈಎಸ್‌ಪಿ ಪ್ರಸನ್ನ ಕುಮಾರ್ ಇವರು ಸರ್ಚ್ ವಾರೆಂಟನ್ನು ಕಳುಹಿಸಿ ಕೊಡುವ ಪೂರ್ವದಲ್ಲಿ ನನ್ನ ಹತ್ತಿರ ಫೋನ್ ನಲ್ಲಿ ಈ ಬಗ್ಗೆ ಏನೂ ವಿಚಾರಣೆ ಮಾಡಿರುವುದಿಲ್ಲ.

25. ನನಗೆ ದಿನಾಂಕಃ22-03-2013 ರಂದು ಡಿವೈಎಸ್‌ಪಿ ಪ್ರಸನ್ನ ಕುಮಾರ್ ಇವರೇ ಖುದ್ದಾಗಿ ಬಂದು ಸರ್ಚ್ ವಾರಂಟ್ ಮತ್ತು ಜ್ಞಾಪನಾ ಪತ್ರ ಕೊಟ್ಟಿರುತ್ತಾರೆ. ಡಿವೈಎಸ್‌ಪಿ ಪ್ರಸನ್ನ ಕುಮಾರ್ ಇವರು ನನಗೆ ಕೊಟ್ಟಾಗ ಬೆಳಗಿನ ಜಾವ 4.30 ಆಗಿತ್ತು. ಅವರು ಕರ್ನಾಟಕ ಲೋಕಾಯುಕ್ತ ಠಾಣೆಗೆ ಬಂದು ಅವುಗಳನ್ನು ಕೊಟ್ಟಿರುತ್ತಾರೆ. ನಾನು ಆಗ ಬೆಳಗಿನ ಜಾವ ಕರ್ತವ್ಯದಲ್ಲಿ ಇದ್ದೆ. ನನಗೆ 21 ನೇ ತಾರೀಖಿಗೆ ಕಲ್ಬುರ್ಗಿ ಎಸ್ ಪಿ ಯವರು ಚಿಕ್ಕಮಗಳೂರಿನ ಲೋಕಾಯುಕ್ತ ಕಛೇರಿ ಸಿಬ್ಬಂದಿ ಬಂದಿದ್ದು ಬೆಳಗಿನ ಜಾವ ಪಂಚರನ್ನು ಕರೆಸಿಕೊಳ್ಳಲು ಹೇಳಿದ್ದರಿಂದ ನಾನು 22 ರಂದು ಬೆಳಿಗ್ಗೆ ಠಾಣೆಯಲ್ಲಿದ್ದೆ ನನಗೆ ಈ ರೀತಿ ಕೇವಲ ಮೌಖಿಕವಾಗಿ ಹೇಳಿರುತ್ತಾರೆ. ಚಿಕ್ಕಮಗಳೂರಿನ ಸಿಬ್ಬಂದಿಯವರಲ್ಲಿ ಡಿವೈಎಸ್‌ಪಿಯವರೂ ಇದ್ದರು. ಆ ಸಿಬ್ಬಂದಿಗಳ ಹೆಸರು ನನಗೆ ಗೊತ್ತಿಲ್ಲ.

26. ದಿನಾಂಕಃ 21-03-2013 ರಂದು ಪಂಚರಿಗೆ ಠಾಣೆಗೆ ಬರಲು ನಾವು ಲಿಖಿತವಾಗಿ ಮೆಮೋ ಕೊಟ್ಟಿದ್ದೆವು. ಈ ಬಗ್ಗೆ ನೋಟೀಸ್ ನ್ನು ಅವರಿಗೆ ಸಂಬಂಧಿಸಿದ ಅಧಿಕಾರಿಗಳಿಗೆ ಕಳುಹಿಸಿದ್ದೆವು. ಆ ದಿನ ನಾನು ಪಂಚರಿಗೆ ಬೇರೆ ಮಾತುಕತೆ ಏನೂ ಆಡಲಿಲ್ಲ ಆ ದಿನ ಕೇವಲ ಸರ್ಚ್ ಹೋಗುವುದಿದೆ ಬೆಳಿಗ್ಗೆ

4.30 ಕ್ಕೆ ಬನ್ನಿ ಎಂದು ಮಾತ್ರಾ ಹೇಳಿದೆ.

27. ನಂತರ ಅವರು ಬೆಳಗಿನ ಜಾವ ಬಂದಾಗ ಕೇವಲ ಪಂಚರು ಮಾತ್ರಾ ಇದ್ದರು. ಅವರ ಜೊತೆ ಬೇರೆ ಯಾರೂ ಬಂದಿರಲಿಲ್ಲ. ಪಂಚರು ಎಲ್ಲಿ ಕೆಲಸ ಮಾಡುತ್ತಾರೆ ಮತ್ತು ಅವರ ವಿವರಗಳನ್ನು ನಾನು ಪಡೆದುಕೊಂಡಿದ್ದೆ. ನಾನು ಪಂಚರಿಗೆ ವಸ್ತುಗಳ ಮೌಲ್ಯಮಾಪನ ಮಾಡುವ ಬಗ್ಗೆ ಸಾಮಾನ್ಯ ಜ್ಞಾನ ಇದೆ ಎಂದು ತಿಳಿಸಿದುಕೊಂಡಿದ್ದೆ. ಅವರಿಗೆ ಈ ಬಗ್ಗೆ ಬೇರೆ ವಿಶೇಷ ಜ್ಞಾನವಿದೆಯೇ ಎಂದು ನಾನು ತಿಳಿದುಕೊಂಡಿಲ್ಲ. ನಾವು ಆ ದಿನ ಸರ್ಚ್ ಮಾಡಲು ನಾನು , ಇಬ್ಬರು ಪಂಚರ , ನಮ್ಮ ಸಿಬ್ಬಂದಿ 6 ಜನ ಒಟ್ಟು 9 ಜನ ಜೀಪಿನಲ್ಲಿ ಹೋದೆವು.

28. ನಾನು ಮೊದಲೇ ಆರೋಪಿತರ ಮನೆಯನ್ನೇನೂ ನೋಡಿರಲಿಲ್ಲ. ನಾನು ಮೊದಲೇ ಆರೋಪಿತರ ಮನೆ ಯಾವ ಜಾಗದಲ್ಲಿದೆ ಎಂದು ಮಾಹಿತಿ ಪಡೆದಿರಲಿಲ್ಲ.

29. ಗುಲ್ಬರ್ಗಾ ದಿಂದ ನಾಸರವಾಡಿ ಗ್ರಾಮ ಸುಮಾರು 50 ರಿಂದ 55 ಕಿ ಮೀ ಅಂತರದಲ್ಲಿರುತ್ತದೆ. ನಾವು ಮಧ್ಯ ಎಲ್ಲೂ ಜೀಪು ನಿಲ್ಲಿಸಿರುವುದಿಲ್ಲ. ನಾವು ಆ ಊರನ್ನು ಪ್ರವೇಶಿದಾಗ ಮೊದಲನೇ ಮನೆ ಆರೋಪಿತರ ಮನೆಯಾಗಿರುತ್ತದೆ. ಡಿವೈಎಸ್‌ಪಿ ಪ್ರಸನ್ನ ಇವರು ನಮ್ಮ ಜೊತೆ ಸರ್ಚ್ ಮಾಡಲು ಬಂದಿರುವುದಿಲ್ಲ.

30. ಸರ್ಚ್ ವಾರೆಂಟನ್ನು ಪ್ರಸನ್ನ ರವರು ಕೊಟ್ಟ ನಂತರ ಅವರು ಅಲ್ಲೇ ಇದ್ದರೋ ಏನೋ ನನಗೆ ಗೊತ್ತಿಲ್ಲ. ನಾವು ನಾಸರವಾಡಿ ಗ್ರಾಮದಲ್ಲಿಊರೊಳಗೆ ಹೋಗಿ ಅಲ್ಲಿ ಇದ್ದ ವ್ಯಕ್ತಿಗಳನ್ನು ಆರೋಪಿಯ

ಮನೆಯ ಬಗ್ಗೆ ವಿಚಾರಣೆ ಮಾಡಿದೆ. ಅವರು ಆ ಬಗ್ಗೆ ನನಗೆ ಹೇಳಿದರು. ಆದರೆ ಅವರುಗಳ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ.

31. ನಾವು ಆರೋಪಿತ ಮತ್ತು ಅವರ ಕುಟುಂಬದವರನ್ನು ನಾವು ಅಲ್ಲಿಗೆ ಬಂದ ಬಗ್ಗೆ ತಿಳಿಸಲು ಫೋನ್ ಮಾಡಿ ಕರೆಸಲು ಪ್ರಯತ್ನ ಮಾಡಿದ್ದೆ ಆದರೆ ಆ ನಂಬರ್ ನನಗೆ ಈಗ ನೆನಪಿಲ್ಲ. ನಾನು ಈ ಬಗ್ಗೆ ಎಸ್ ಪಿ ಯವರಿಗೆ ಆರೋಪಿತರನ್ನು ಭೇಟಿ ಮಾಡುವ ಬಗ್ಗೆ ತಿಳಿಸಿದೆ. ನಾನು ಸ್ವತಃ ಆರೋಪಿತರಿಗೆ ಫೋನ್ ಮಾಡಲು ಪ್ರಯತ್ನಿಸಿಲ್ಲ. ಸಾಕ್ಷಿಯು ಅಲ್ಲಿ ಇದ್ದ ಅರ್ಜುನ್ ಈತನು ಆರೋಪಿತರ ಮನೆಯವರ ಜೊತೆ ಮಾತನಾಡಿರುತ್ತಾನೆ. ಅರ್ಜುನ್ ಈತನ ನಂಬರ್ ನನಗೆ ನೆನಪಿಲ್ಲ. ಅರ್ಜುನ್ ಈತನು ಆರೋಪಿತರ ಮನೆಯವರೊಂದಿಗೆ ಮಾತನಾಡಿದೆ ಎಂದು ಹೇಳಿದ. ಅವನು ಮಾತನಾಡಿದವರ ಹೆಸರು ನನಗೆ ಗೊತ್ತಿಲ್ಲ.

32. ನಾವು ಆ ವಿಷಯವನ್ನು ಮಹಜರ್ ನಲ್ಲಿ ನಮೂದು ಮಾಡಿರುವುದಿಲ್ಲ. ನಾವು ಪ್ರವೇಶ ಮಾಡಿದ ಮನೆ ಆರೋಪಿಯ ಪಿತ್ರಾರ್ಜಿತವೋ ಅಥವಾ ಕ್ರಯಕ್ಕೆ ಕೊಂಡಿದ್ದೋ ಎಂದು ನಾವು ಅರ್ಜುನನನ್ನು ವಿಚಾರಿಸಲಿಲ್ಲ. ನಾನು ಅಲ್ಲಿ ಅರ್ಜುನನ್ನು ಆರೋಪಿ ಮನೆ ಕಟ್ಟುವುದಕ್ಕೆ ಮೊದಲು ಅಲ್ಲಿ ಕಟ್ಟಡವಿತ್ತೋ ಇಲ್ಲವೋ ಎಂದು ವಿಚಾರಿಸಿಲ್ಲ.

33. ಆರೋಪಿಯ ಮನೆ ಪ್ರವೇಶಿಸಿದಾಗ ಆ ಮನೆ ಗೇಟ್ ಉತ್ತರ ದಿಕ್ಕಿಗೆ ಇದ್ದು ಮನೆ ಎದುರಿನ ಗೋಡೆಗೆ ವಿದ್ಯುತ್ ಮೀಟರ್ ಅಳವಡಿಸಿರುತ್ತಾರೆ. ಪ್ಲಾಸ್ಟಿಕ್ ಬ್ಯಾರಲ್ ಯಾವ ಕಂಪನಿಯದ್ದು ಎಂದು ನಾವು ನಮೂದಿಸಿಲ್ಲ.

34. ನಾವು ಆ ಸಬ್ ಮರ್ಸಿಬಲ್ ಪಂಪ್ ಮತ್ತು ಮೋಟಾರ್ ಯಾವ

ಕಂಪನಿಯದ್ದು ಎಂದು ತಿಳಿದುಕೊಂಡಿರುವುದಿಲ್ಲ. ಮನೆಯ ಸ್ವಿಚ್ ಬೋರ್ಡು ಮತ್ತು ಬೋರ್ ವೆಲ್ ಸ್ವಿಚ್ ಬೋರ್ಡು ಒಂದೇ ಕಡೆ ಇದ್ದವೋ ಬೇರೆ ಕಡೆ ಇದ್ದವೋ ನಾನು ಗಮನಿಸಿರುವುದಿಲ್ಲ. ಆ ಬೋರ ವೆಲ್ ನಲ್ಲಿ ಮೋಟಾರ್ ಇದೆಯೋ ಇಲ್ಲವೋ ಎಂದು ಪರಿಶೀಲನೆ ಮಾಡಿರುವುದಿಲ್ಲ. ನಾವು ನೋಡಿದಾಗ ಆ ಬೋರ್ ಚಾಲನೆಯಲ್ಲಿತ್ತು.

35. ಆ ಸಿಮೆಂಟ್ ಪೋಲ್ ಗಳು ಆರೋಪಿಗೆ ಸಂಬಂಧಪಟ್ಟಿದ್ದು ಎಂದು ಸೂಚಿಸುವುದು ಸರಿಯಲ್ಲ. ಅವರು ಆ ಪಂಪ್‌ನ್ನು ಎಷ್ಟು ಆಳ ಇದೆ , ಯಾವ ಕಂಪನಿಯ ಪೈಪ್ ಹಾಕಿದ್ದಾರೆ ಇವುಗಳನ್ನು ಪರಿಶೀಲಿಸಿ ಅಂದಾಜು ಮಾಡಿರುವುದಿಲ್ಲ ಕೇವಲ ಸಾಮಾನ್ಯ ಜ್ಞಾನದಂತೆ ಅಂದಾಜು ಮೌಲ್ಯ ಮಾಡಲಾಗಿದೆ.

36. ನಾವು ಅವುಗಳ ಮೌಲ್ಯಮಾಪನವನ್ನು ಸಾಮಾನ್ಯ ಮೌಲ್ಯಮಾಪನಕ್ಕಿಂತ 10 ಪಟ್ಟು ಹೆಚ್ಚಿಗೆ ಉದ್ದೇಶ ಪೂರ್ವಕವಾಗಿ ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಆ ಬೋರ್ ವೆಲ್ ಕೇವಲ 25 ರಿಂದ 30 ಸಾವಿರ ರೂ ಬೆಲೆ ಬಾಳುತ್ತದೆ ಎಂದು ಸೂಚಿಸುವುದು ಸರಿಯಲ್ಲ.

37. ನಾವು ಆ ಮನೆಯನ್ನು ಟೇಪ್ ತೆಗೆದುಕೊಂಡು ಅಳತೆ ಮಾಡಿ ಅಳತೆ ನಮೂದಿಸಿರುತ್ತೇವೆ. ನಾವು ಸರ್ಚ್ ಮಾಡಲು ಹೋದಾಗ ಏನೇನು ವಸ್ತುಗಳನ್ನು ತೆಗೆದುಕೊಂಡು ಹೋಗಿದ್ದೆವೆಂದು ಬರೆದಿರುವುದಿಲ್ಲ. ನಾವು ಟೇಪ್ ನಿಂದ ಅದನ್ನು ಅಳತೆ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ.

38. ನಾವು ಆರೋಪಿ ಶೋಕೇಸ್ ನ್ನು ಯಾವಾಗ ಮಾಡಿಸಿದ್ದನು , ಎಲ್ಲಿ

ಮಾಡಿಸಿದ್ದನು ಎಂದು ನಾವು ಅರ್ಜುನನನ್ನು ವಿಚಾರಿಸಿಲ್ಲ. ಆ ಲ್ಯಾಮಿನೇಷನ್ ಫೋಟೋ ಏನು ಎಂದು ನಾವು ನಮೂದಿಸಿರುವುದಿಲ್ಲ. ಎಲ್ ಸಿ ಡಿ ಮಾನಿಟರ್ , ಶ್ಯೂ ಸ್ಟ್ಯಾಂಡ್ , 4 ಪ್ಲಾಸ್ಟಿಕ್ ಚೇರ , ಸೋಫಾಸೆಟ್ಟು ಇವುಗಳು ಎಷ್ಟು ಹಳೆಯವು ಎಂದು ವಿಚಾರಿಸಿಲ್ಲ ಆದರೆ ಅವುಗಳ ಸುಸ್ಥಿತಿಯಲ್ಲಿದ್ದ ಬಗ್ಗೆ ಆ ಎಲ್ಲಾ ವಸ್ತುಗಳ ವೀಡಿಯೋ ಕೂಡಾ ಮಾಡಿದ್ದೇವೆ. ಮೇಲೆ ಹೇಳಿದ ಎಲ್ಲಾ ವಸ್ತುಗಳು ಸುಸ್ಥಿತಿಯಲ್ಲಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.  ಆ ವಸ್ತುಗಳ ಮೌಲ್ಯ ಮಾಪನವನ್ನು ಕೂಡಾ ಉದ್ದೇಶ ಪೂರ್ವಕವಾಗಿ ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

39. ಪೂರ್ವ ದಿಕ್ಕಿನ ಗೋಡೆಯಲ್ಲಿದ್ದ ಶೋಕೇಸ್ ನಲ್ಲಿ ಯಾವುದಾದರೂ ವಸ್ತುಗಳಿರುವ ಬಗ್ಗೆ ನಮೂದು ಮಾಡಿಲ್ಲ. ಆ ರೀತಿ ಶೋಕೇಸ್ ನ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

40. ಗೋದ್ರೇಜ್ ಕಬ್ಬಿಣದ ಅಲ್ಮೇರಾ ಆ ರೂಂ ನಲ್ಲಿ ಯಾವ ಭಾಗದಲ್ಲಿತೆಂದು ನನಗೆ ಈಗ ನೆನಪಿಲ್ಲ. ಆ ಅಲ್ಮೇರಾ ಸಂಪೂರ್ಣ ಹಾಳಾಗಿತ್ತು ಮತ್ತು ಅದರ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

41. ನಾವು ಪರಿಶೀಲಿಸಿದ 52 ಆಡಿಯೋ ವೀಡಿಯೋ ಕ್ಯಾಸೆಟ್ ಮತ್ತು ಸಿಡಿ ಗಳು ಯಾವ ಭಾಷಯಲ್ಲಿತ್ತು , ಹೊಸದೋ ಹಳೆದೋ ಎಂದು ನಾವು ಪರಿಶೀಲಿಸಿರುವುದಿಲ್ಲ. ಅವು ಯಾವ ಭಾಗದಲ್ಲಿತು ಎಂದು ನನಗೆ ನೆನಪಿಲ್ಲ. ಅವು ಸಂಪೂರ್ಣ ಹಳೆಯದ್ದಾಗಿದ್ದು ಅವುಗಳ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

42. ಸ್ಯಾಮ್ ಸಂಗ್ ಟಿ ವಿ ಇದು ಯಾವ ವರ್ಷದ್ದೆಂದು ನಾವು ಪರಿಶೀಲಿಸಿರುವುದಿಲ್ಲ. ಅದರ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

43. ಸೀಲಿಂಗ್ ಫ್ಯಾನ್ ಮತ್ತು ಬಲ್ಬ್ ಗಳ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಈಗ ಆ 16 ಬಲ್ಬ್ ಗಳು ಎಲ್ಲಿದ್ದವು ಎಂದು ನನಗೆ ಹೇಳಲು ಆಗುವುದಿಲ್ಲ.

44. ಮೇಲೆ ಹೇಳಿದ ಜೋಳ , ಸಜ್ಜೆ , ತೊಗರಿ , ಕಡ್ಲೆ ಈ ಚೀಲಗಳು ಆ ಮನೆಯ ಹಾಲ್ ನಲ್ಲಿಯೇ ಇದ್ದವು. ಅವುಗಳ ಮೌಲ್ಯ ಮಾಪವನ್ನು ನಾವು ಮಾಡಲಿಲ್ಲ ಏಕೆಂದರೆ ಅರ್ಜುನನ್ನು ವಿಚಾರಿಸಿದಾಗ ಆತ ಅವು ಆರೋಪಿಯ ಹೊಲದಿಂದ ಬಂದ ಬೆಳೆಗಳು ಎಂದು ಹೇಳಿದ.

45. ಡೈನಿಂಗ್ ಟೇಬಲ್ , ಪ್ರಿಸ್ಟೇಜ್ ಗ್ಯಾಸ್ ಸ್ಟೌ ಯಾವ ವರ್ಷ ಖರೀದಿಸಿದ್ದು ಎಂದು ವಿಚಾರಿಸಿಲ್ಲ. ಗ್ಯಾಸ್ ಸ್ಟೌ ಉಪಯೋಗದಲ್ಲಿದ್ದುದನ್ನು ನಾನು ಪರಿಶೀಲಿಸಿದ್ದೇನೆ. ಆ ಗ್ಯಾಸ್ ಸ್ಟೌ ಆಗಲೀ ಸಿಲಿಂಡರ್ ಆಗಲೀ ಉಪಯೋಗದಲ್ಲಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಆ ಗ್ಯಾಸ್ ಸಿಲಿಂಡರ್ , ಡೈನಿಂಗ್ ಟೇಬಲ್ , ಫ್ರಿಡ್ಜ್ ಇವುಗಳ ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಆ ಫ್ರಿಡ್ಜ್ ಕೆಲಸ ಮಾಡುತ್ತಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

46. 6 ಕಟ್ಟಿಗೆ ಮಣಿಗಳು , ಟ್ಯೂಬ್ ಲೈಟ್ ಇವುಗಳು ಹಾಳಾಗಿವೆ ಮತ್ತು ಅವುಗಳಿಗೆ ಯಾವುದೇ ಮೌಲ್ಯ ಇಲ್ಲದಿದ್ದರೂ ನಾನು ಅವುಗಳ ಮೌಲ್ಯ ಕಟ್ಟಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

47. ಕಂಚಿನ ಕಳಸ , ವಾರ್ಡ್ ರೂಬ್ , ಪಾತ್ರೆಗಳು ಇವುಗಳಿಗೆ ಕೂಡಾ ನಾನು ಮೌಲ್ಯ ಮಾಪನವನ್ನು ಅತೀ ಹೆಚ್ಚು ಕಾಣಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

48. ಆ ವಾರ್ಡ್ ರೂಬ್ ನ್ನು ಪ್ಲೈವುಡ್ ಮತ್ತು ಮೆಟಲ್ ಜೊತೆ ಮಾಡಿದ್ದರು. ನಾವು ಆ ವಸ್ತುಗಳನ್ನೆಲ್ಲಾ ಅವರು ಎಲ್ಲಿ ಮಾಡಿಸಿದ್ದಾರೆಂದು ಅರ್ಜುನನಿಗೆ ಕೇಳಿದಾಗ ಆ ಮಾಹಿತಿ ಇಲ್ಲ ಎಂದು ಹೇಳಿದ್ದಾನೆ.

49. ನಾವು ಬೆಡ್ ರೂಂ ನ ಅಳತೆ ಮಾಡಿರುವುದಿಲ್ಲ. ಅದೇ ರೀತಿ ಕೋಣೆ ಅಳತೆಯನ್ನೂ ಮಾಡಿರುವುದಿಲ್ಲ. ಚಾಪೆ , ಜುಮರ್ ಸೆಟ್ , ಎಕ್ಸಿಕ್ಯೂಟೀವ್ ಚೇರ್ , 2 ಚೌಕ ಮಣೆ , ಒಂದು ಟ್ಯೂಬ್ ಲೈಟ್ , 4 ಶರ್ಟು ಮತ್ತು 2 ಪ್ಯಾಂಟು , 2 ಕಂಪ್ಯೂಟರ್ ಕೀಬೋರ್ಡು ಇವುಗಳಿಗೆ ಯಾವುದೇ ಮೌಲ್ಯ ಇಲದಿದ್ದರೂ ನಾನು ಮೌಲ್ಯ ಕಾಣಿಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

50. ಡಬಲ್ ಕಾಟ್ , ಸಿಂಗಲ್ ಕುರ್ಲಾನ್ ಬೆಡ್ , ವಾರ್ಡ್ ರೂಬ್ ಇವುಗಳನ್ನು ಯಾವಾಗ ತಂದಿದ್ದು ಎಂದು ನಾವು ಅರ್ಜುನನ್ನು ವಿಚಾರ ಮಾಡಿದ್ದೇವೆ ಆಗ ಆತ ಕಾಟನ್ನು ಇತ್ತೀಗಷ್ಟೆ ಮಾಡಿಸಿದ್ದು ಇನ್ನೂ 2 ಕಾಟ್ ಮಾಡಿಸಲು ರೆಡಿ ಇದೆ ಎಂದು ಹೇಳಿದ. ಆ ಬೆಡ್ಡುಗಳನ್ನು ಇತ್ತೀಚೆಗೆ ತಂದಿದ್ದಾರೆ ಎಂದು ಹೇಳಿದ ಆದರೆ ಯಾವಾಗ ಎಂದು ಖಚಿತವಾಗಿ ಹೇಳಿರುವುದಿಲ್ಲ. ಆ ಕಾಟು ಮತ್ತು ಬೆಡ್ಡು ಹಳೆಯವು ಎಂದು ಸೂಚಿಸುವುದು ಸರಿಯಲ್ಲ. ನಾನು ಸಿಂಗಲ್ ಕಾಟು , ಬೆಡ್ಡು ಇವುಗಳಿಗೆ ಅತೀ ಹೆಚ್ಚು ಮೌಲ್ಯ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಆ ಪ್ಯಾಂಟು ಮತ್ತು ಶರ್ಟು ಚೆನ್ನಬಸಪ್ಪ ಇವರಿಗೆ ಸಂಬಂಧಿಸಿದ್ದು ಎಂದು ಗೊತ್ತಾಯಿತು.

ಆ ಬಟ್ಟೆಗಳು ಉಪಯೋಗಿಸದೇ ಇರುವ ಬಟ್ಟೆಗಳು ಆದರೂ ಅವುಗಳಿಗೆ ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

51. ನಿಪಿ.5 ರ ಪುಟ ಸಂಃ 4 ಮತ್ತು 4(ಎ) ರಶೀದಿಗಳಲ್ಲಿರುವ ನಿರಂಜನ ಎನ್ನುವವರನ್ನು ವಿಚಾರಿಸಿರುವುದಿಲ್ಲ ಸಾಕ್ಷಿ ಮುಂದುವರೆದು ಹೇಳುತ್ತಾರೆ ಆರೋಪಿಯ ಚೆನ್ನಬಸಪ್ಪ ಎಂದು ಹೆಸರಿದ್ದುದರಿಂದ ನಾವು ವಿಚಾರ ಮಾಡಿರುವುದಿಲ್ಲ.

52. ಆ ರಶೀದಿಗಳಲ್ಲಿ ಕಾಣಿಸಿದ ವಸ್ತುಗಳು ಮನೆಯಲ್ಲಿ ಇದೆಯೋ ಇಲ್ಲವೋ ಎಂದು ನಾನು ಪರಿಶೀಲಿಸಿದ್ದೆನೋ ಇಲ್ಲವೋ ನನಗೆ ಈಗ ನೆನಪಿಲ್ಲ. ನಾವು ಆ ಮನೆಯನ್ನು ಎಲ್ಲಾ ಸರ್ಚ್ ಮಾಡಿರುತ್ತೇವೆ. ಆಗ ನಮಗೆ ಇನ್ ವಾಯ್ಸ್ ಗಳಲ್ಲಿ ಕಾಣಿಸಿರುವ ವಸ್ತುಗಳು ಕಂಡು ಬಂದಿರುವುದಿಲ್ಲ. ಆ ರಶೀದಿಗಳು ಆರೋಪಿಗೆ ಸಂಬಂಧಿಸಿದ್ದ ಎಂದು ಸೂಚಿಸುವುದು ಸರಿಯಲ್ಲ.

53. ಆ ನೋಟ್ ಬುಕ್ ಮತ್ತು ರಶೀದಿ, ಲೆಟರ್ ಗಳನ್ನು ನಾವು ಸೃಷ್ಟಿ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

54. ನಾವು ಕಾಣಿಸಿರುವ ಕಾರ್ಪೇಟ್ , ಬ್ಲಾಂಕೇಟ್ , ಚಿಕ್ಕ ಕಾರ್ಪೇಟ್ ಇವುಗಳಿಗೆ ನಾವು ಹೆಚ್ಚು ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

55. ದೇವರ ಕೋಣೆಯಲ್ಲಿದ್ದ ಬಲ್ಬ್ ಎಷ್ಟು ವೋಲ್ಟೇಜ್ ಎಂದು ನನಗೆ ಹೇಳಲಾಗುವುದಿಲ್ಲ. ಅಲ್ಲಿದ್ದ ಕಂಚಿನ ಕಳಸ ತುಂಬಾ ಹಳೆಯದ ಎಂದು ಸೂಚಿಸುವುದು ಸರಿಯಲ್ಲ. ದೇವರ ಫೋಟೋ ಮತ್ತು ಕಂಚಿನ ಕಳಸ

ಇವುಗಳಿಗೆ ಹೆಚ್ಚು ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ.

56. ನಾವು ಪಂಚನಾಮೆಯಲ್ಲಿ ಕಾಣಿಸಿದ ಟ್ರೇಡ್ ಮಿಶಿನ್ ಇವು ಹಳೆಯದ್ದು ಎಂದು ಸೂಚಿಸುವುದು ಸರಿಯಲ್ಲ. ನಾನು ಅವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

57. ನಾವು ಕಾಣಿಸಿರುವ ಸ್ಪೀಕರ್ ಮತ್ತು ಮೌಸ್ ಉಪಯೋಗಕ್ಕ ಬರದೇ ಇದ್ದರೂ ಅವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

58. ನಾವು ಆಫೀಸ್ ಟೇಬಲ್ , ಕಾಟಿನ ಬಿಡಿಭಾಗಗಳು ಇವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

59. ಪಶ್ಚಿಮ ದಿಕ್ಕಿನಲ್ಲಿರುವ ಬೆಡ್ ರೂಂನಲ್ಲಿ 3 ಚೀಲ ಮೆಕ್ಕೆ ಜೋಳ , ಒಂದು  ಚೀಲ ಸಜ್ಜೆ ಇವು ಆರೋಪಿತರ ಹೊಲದಲ್ಲಿ ಬೆಳೆದಿದ್ದು ಎಂದು ಕಂಡು ಬಂದಿತು.

60. ಟ್ಯೂಬ್ ಲೈಟ್ , ಫ್ಯಾನು , ಎಣ್ಣೆ ಹೊಡೆಯುವ ಸ್ಪ್ರೇ ಮಿಶಿನ್ ಇವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

61. ನಾವು ಬಲಭಾಗದ ಬೆಡ್ ರೂಂ ನಲ್ಲಿ ಕಾಣಿಸಿರುವ ವಸ್ತುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

62. ಬೆಡ್ ರೂಂ ನ ಎಡಭಾಗದ ಕೋಣೆಯಲ್ಲಿ ಕಂಡು ಬಂದ ತೊಗರಿ

ಚೀಲ ಆರೋಪಿಯ ಹೊಲದಲ್ಲಿ ಬೆಳೆದಿದ್ದು ಎಂದು ಕಂಡು ಬಂದಿತು.

63. ಅದೇ ರೀತಿ ಬಕೇಟ್ ಮತ್ತು ಮಗ್ಗು ಇವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

64. ನಾವು ಅಲ್ಲಿ ಟೆರೆಸ್ ನಲ್ಲಿ ಇರುವ ವಾಟರ್ ಟ್ಯಾಂಕ್ ಮತ್ತು ಡಿಟಿ ಹೆಚ್ ಯಾವ ಕಂಪನಿಯವು ಎಂದು ವಿಚಾರಿಸಿಲ್ಲ ಮತ್ತು ಅವುಗಳಿಗೆ ಹೆಚ್ಚಿನ ಮೌಲ್ಯ ಮಾಪನಾ ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

65. ನಾನು ಅಲ್ಲಿ ಕಂಡು ಬಂದ ಎಲ್ಲಾ ವಸ್ತುಗಳನ್ನು ಯಾವಾಗ ಖರೀದಿಸಿದ್ದು ಮತ್ತು ಅದರ ದಾಖಲಾತಿಗಳ ಬಗ್ಗೆ ವಿಚಾರ ಮಾಡಿದ್ದೇನೆ ಆದರೆ ಮಾಹಿತಿ ದೊರೆತಿರುವುದಿಲ್ಲ.

66. ನಾವು ಮನೆಯನ್ನು 93x78 ಎಂದು ಚ .ಅಡಿಯಲ್ಲಿ ಅಳತೆ ಮಾಡಿರುತ್ತೇನೆ ಆದರೆ ಅದು ಅಂದಾಜು ಎಂದು ತಪ್ಪಾಗಿ ನಮೂದಾಗಿರುತ್ತದೆ.

67. ನಾನು ನೆಲ ಹಾಸಿಗೆ ಮೇಲೆ ಗ್ರಾನೈಟ್ ಕಲ್ಲುಗಳು , ಸೀಲಿಂಗ್ ಫ್ಯಾನುಗಳು ಯಾವ ಕಂಪನಿಯವು ಎಂದು ವಿಚಾರಿಸಿರುವುದಿಲ್ಲ.

68. ನಾವು ಅರ್ಜುನ್ ನ್ನು ವಿಚಾರಿಸಿದಾಗ ಆತ ಆ ಬುಲೆರೋ ವಾಹನ ಅವರ ಚಿಕ್ಕಪ್ಪ ಆರೋಪಿ ಬಳಸುತ್ತಿದ್ದ ಎಂದು ಹೇಳಿದ್ದಾನೆಂದು ಸುಳ್ಳು ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅರ್ಜುನನ ಮನೆಗೂ ನಾವು ರೈಡ್ ಮಾಡುವ ಮನೆಗೆ 50 ರಿಂದ 80 ಕಿ ಮೀ ಅಂತರವಿರುತ್ತದೆ. ಆ ಆರ್ ಸಿ ಬುಕ್ ಶಿವಕುಮಾರ್ ಬಾಲಚಂದ್ರ ಹೊನ್ನಾಳಿ ಎನ್ನುವವರ

ಹೆಸರಿನಲ್ಲಿರುತ್ತದೆ. ಬಿ ಎಕ್ಸ್ ಟ್ರ್ಯಾಕ್ಟ್ ಕೂಡಾ ಶಿವಕುಮಾರ್ ಬಾಲಚಂದ್ರ ಹೊನ್ನಾಳಿ ರವರ ಹೆಸರಿನಲ್ಲಿರುತ್ತದೆ. ಇನ್ಸೂರೆನ್ಸ್ ರಾಜಕುಮಾರ್ ಪಾಟೀಲ್ ಎನ್ನುವವರ ಹೆಸರಿನಲ್ಲಿದೆ. ಬುಲೇರೋ ಜೀಪು ಆರೋಪಿ ಯಾವಾಗ ಖರೀದಿಸಿದ್ದು ಎಂದು ನಾನೇನು ಕೇಳಿರುವುದಿಲ್ಲ.

69. ಆ ಬುಲೇರೋ ವಾಹನ , ಆ ದಾಖಲೆಗಳು , ಪಾಸ್ ಪುಸ್ತಕಗಳು ಯಾವುದೇ ವಸ್ತುಗಳು ಆರೋಪಿಗೆ ಸಂಬಂಧಪಟ್ಟಿದ್ದಲ್ಲ ಎಂದು ಸೂಚಿಸುವುದು ಸರಿಯಲ್ಲ.

70. ಅದೇ ರೀತಿ ಕೃಷ್ಣ ಗ್ರಾಮೀಣ ಬ್ಯಾಂಕಿನ ದಾಖಲೆ ಮತ್ತು ಸಾಲ ಮರುಪಾವತಿಗೆ ಕೋರಿ ಕೊಟ್ಟ ನೋಟೀಸು , ಮೆಡಿಕಲ್ ಬಿಲ್ಲುಗಳು , ಪಡಿತರ ಚೀಟಿ ಆ ವಾಹನದಲ್ಲಿ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಾವು ಆರೋಪಿಗೆ ಸಂಬಂಧ ಕಲ್ಪಿಸುವ ಸಲುವಾಗಿ ಅವು ಅಲ್ಲಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೆನೆ ಎಂದು ಸೂಚಿಸುವುದು ಸರಿಯಲ್ಲ.

71. ನಾವು ಪಂಚನಾಮಯಲ್ಲಿ 4,96,613/- ರೂ. ಬಲೆ ಬಾಳುವ ವಸ್ತುಗಳಿದ್ದವು ಎಂದು ಅತೀ ಹೆಚ್ಚು ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ಆ ಮನೆ 17 ರಿಂದ 18 ಲಕ್ಷ ಬೆಲೆ ಬಾಳುತ್ತಿದ್ದರೂ ಕೂಡಾ ನಾವು 25 ಲಕ್ಷ ಎಂದು ಮೌಲ್ಯ ಮಾಪನ ಮಾಡಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ನಾವು ಆ ಪಂಚನಾಮಯನ್ನು ಕಚೇರಿಯಲ್ಲಿ ಕಳಿತು ಮಾಡಿ ಅದನ್ನು ಇದಕ್ಕೆ ಸೇರಿಸಿದ್ದೇವೆ ಎಂದು ಸೂಚಿಸುವುದು ಸರಿಯಲ್ಲ. ವೀಡಿಯೋ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಅವುಗಳನ್ನು ನಾವು ಸೃಷ್ಟಿಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

72. ನಾನು ಡಿವೈಎಸ್ ಪಿ ಪ್ರಸನ್ನ ರವರ ಮಾತನ್ನು ಕೇಳಿ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

Sd/-29-10-2019

**(ಪಿ.ಎನ್.ದೇಸಾಯಿ)**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ಚಿಕ್ಕಮಗಳೂರು.**

***CCK***